

## ಚಿತ್ರಪಟ ಕಥನ

‘ಹಣತೆಯ ಬೆಳಕಲ್ಲಿ ಎಷ್ಟೊಂದು ಮುಖ?’ (ಚಿತ್ರಪಟ ಕಥನ, ಅ. 27) ಚಿತ್ರ–ಬರಹ ಎರಡೂ ಅದ್ಭುತ. ದೀಪ ಉರಿದು ಬೆಳಕನ್ನು ಕೊಡುವಂತೆ, ಜಗದ ಬದುಕು–ಬೆಳಕನ್ನು ಸಹ್ಯವಾಗಿಸಲು ದುಡಿವ ಇಂಥ ಅದೆಷ್ಟೋ ಕುಶಲಕರ್ಮಿ ಜೀವಿಗಳೇ ನಮ್ಮ ಬದುಕಿನ ಭಾಗ್ಯದಾತರು. ಈ ಬರಹಕ್ಕೆ ಕವಿ ಜಿ.ಎಸ್. ಶಿವರುದ್ರಪ್ಪ ಅವರ ‘ಹಣತೆ ಹಚ್ಚುತ್ತೇನೆ...’ ಕವನ ಸರಿಯಾದ ನಿದರ್ಶನವಾಗಬಲ್ಲದು.

—ಕೊಹಿಮ, ಬಸರಕೋಡು

## ದೇಸೀ ಕ್ರೀಡೆ, ಸಮಗ್ರ ಮಾಹಿತಿ



ಕಬಡ್ಡಿ ಕಬಡ್ಡಿ (ಪ್ರಮೋದ, ಅ. 27) ಮುಖಪುಟ ಲೇಖನ ದೇಸೀ ಕ್ರೀಡೆ ಬಗ್ಗೆ ಸಮಗ್ರ ಮಾಹಿತಿ ನೀಡಿದೆ. ಐಪಿಎಲ್ ಕ್ರಿಕೆಟ್‌ನಂತೆ ಪಿಕೆಎಲ್ ಜನಪ್ರಿಯತೆ ಹಾದಿ ಹಿಡಿದದ್ದು, ಕ್ರೀಡಾಪ್ರೇಮಿಗಳು ಕಾತರದಿಂದ ಕಾಯುವಂತೆ ಮಾಡುವ ಕಬಡ್ಡಿ ಆಟ ವಿಶ್ವಮಟ್ಟದಲ್ಲಿ ಮಾನ್ಯತೆ ಪಡೆದದ್ದು ನಮ್ಮ ದೇಶದ ಹೆಮ್ಮೆ.

—ಕೃಷ್ಣರಾಜ ಎಸ್. ಚಿಕ್ಕಮಗಳೂರು

## ಲ್ಯಾಬ್ ಟೆಸ್ಟ್-ಉಪಯುಕ್ತ ಮಾಹಿತಿ

ಲ್ಯಾಬ್ ಟೆಸ್ಟ್ ಮಾಡಿಸಿದ್ರಾ? (ಡಾ. ವಿನಯ ಶ್ರೀನಿವಾಸ್, ಅ. 27) ಲೇಖನ, ಲ್ಯಾಬ್ ಟೆಸ್ಟ್ ಮಾಡಿಸುವ ಬಗ್ಗೆ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಲ್ಯಾಬ್ ಟೆಸ್ಟ್‌ಗಳನ್ನು ಮಾಡಿಸುವಾಗ ರೋಗಿಗಳು ಸರಿಯಾದ ಪೂರ್ವಸಿದ್ಧತೆ ಇಲ್ಲದೆ ಮಾಡಿಸಿದರೆ ಅದರಿಂದ ಬರುವ ತಪ್ಪು ವರದಿಗಳಿಂದ ವೈದ್ಯರು ನೀಡುವ ಔಷಧೋಪಚಾರಗಳಲ್ಲೂ ವ್ಯತ್ಯಯವಾಗುವುದರಿಂದ ಅಪಾಯವಾಗುವ ಸಂಭವವೇ ಹೆಚ್ಚು! ಈ ಬರಹ ವೈದ್ಯಕೀಯ ಪರೀಕ್ಷೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದೆ.

—ಚಾವಲ್ಮನೆ ಸುರೇಶ್ ನಾಯಕ್. ಕೊಪ್ಪ

ಆರೋಗ್ಯ ಲೇಖನ ಓದುಗರಿಗೆ ಸರಳ ಭಾಷೆಯಲ್ಲಿ ಎಲ್ಲ ವೈದ್ಯಕೀಯ ಟೆಸ್ಟ್‌ಗಳ ಮಾಹಿತಿ ನೀಡಿದ್ದು ಅತ್ಯಂತ ಉಪಯುಕ್ತವಾಗಿದೆ. ಇದೊಂದು ಸಂಗ್ರಹಯೋಗ್ಯ ಬರಹ.

—ಶಿವಕುಮಾರ ಕೊ. ಬಣಗಾರ, ಬಾಗಲಕೋಟೆ

## ಪ್ರವಾಸ ಬರಹ ‘ವಾವ್’

‘ಮರದ ಅರಮನೆಗೆ ನಿಸರ್ಗದ ಪ್ರಭಾವಳಿ’ (ಆದರ್ಶ. ಬಿಎಸ್. ಅ. 27) ಪ್ರವಾಸ ಬರಹ ಖುಷಿ ನೀಡಿತು. ದೇವಸ್ಥಾನಗಳ ನಾಡು ಎಂದು ಕರೆಯಲ್ಪಡುವ ತಮಿಳುನಾಡಿನಲ್ಲಿ ಪದ್ಮನಾಭಪುರಂ ಅರಮನೆ ಚಿತ್ರ ನೋಡಿ ‘ವಾವ್’ ಎನ್ನುವಂತಾಯಿತು. ಪ್ರಕೃತಿಯ ಮಡಿಲಲ್ಲಿರುವ ಈ ಅರಮನೆಯ ಭವ್ಯತೆಗೆ ಮರದ ಕಲಾಕೃತಿಯೇ ಭೂಷಣ. ಟ್ರಾವೆಲ್ಸ್ ಸಂಸ್ಥೆಯವರು ಇಂತಹ ಸ್ಥಳಗಳನ್ನು ಗುರುತಿಸಿ ಪ್ರವಾಸಿಗರಿಗೂ ಪರಿಚಯಿಸುವ ಕೆಲಸ ಮಾಡಿದರೆ ಚೆನ್ನಾಗಿರುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ಪುನೀತ-ವಿನೀತ

‘ಪುನೀತ್ ಇಲ್ಲಿ ಜೀವಂತ!’ (ಸ್ವರೂಪ್ ಕೊಟ್ಟೂರು, ಅ. 27) ‘ಅವರವರ ಭಾವಕ್ಕೆ, ಅವರವರ ಭಕ್ತಿಗೆ’ ಎನ್ನುವ ಹಾಗೆ ಅಪ್ಪುವಿನ ಸ್ಮಾರಕಕ್ಕೆ ಭಕ್ತಿ ಭಾವದಿಂದ ಪ್ರತಿ ದಿನ ಕೈಗೊಳ್ಳುವ ಕೈಂಕರ್ಯದಿಂದ ಜೀವನದಲ್ಲಿ ನೆಮ್ಮದಿ ಕಾಣುತ್ತಿದ್ದು ಪುನೀತನಾಗಿರುವ ಉಮೇಶನಿಗೆ ಒಳ್ಳೆಯದಾಗಲಿ ಎನ್ನೋಣವೇ?

—ಭಾರತೀ ಗಂಗಾಧರ್. ಬೆಂಗಳೂರು

ಉಮೇಶ್ ಅವರ ಕಾರ್ಯವೈಖರಿ ಮನಮುಟ್ಟುವಂತಿದೆ. ಅವರ ಅಭಿಮಾನಕ್ಕೆ ಸರಿಸಾಟಿಯೇ ಇಲ್ಲ. ಅಪ್ಪು ಸರ್ ಅವರಿಗೆ ಮೇಲಿಂದಲೇ ಆಶೀರ್ವದಿಸುತ್ತಿರಲಿ ಎಂದು ಹಾರೈಸುತ್ತೇನೆ.

—ಜಿ. ಸುಬ್ರಹ್ಮಣ್ಯ, ಬೆಂಗಳೂರು

## ಸಕಾಲಿಕ ಲೇಖನ, ನಗು ಬಂತು!

‘ಆಫರ್ ಹಾವಳಿ’ (ಮಂದಹಾಸ, ಅ. 27) ಮಣ್ಣೆ ರಾಜು ಅವರ ಲೇಖನ ಓದಿ ನಗು ಬಂತು. ದೀಪಾವಳಿಯ ಈ ಸಂದರ್ಭದಲ್ಲಿ ಈ ಬರಹ ಸಕಾಲಿಕವೂ ಆಗಿದೆ. ದೀಪಾವಳಿ ಹಬ್ಬದ ದಿನಗಳಲ್ಲಿ ಗಂಡಸರ ಕಿಸೆ ಖಾಲಿಯಾಗುವುದು ಸತ್ಯ ಎಂಬುದನ್ನು ಈ ಮಂದಹಾಸ ಬರಹ ತಿಳಿಸಿದೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಶಕ್ತಿ ಮದ್ದು

‘ಭೇಷ್ – ಎಲ್ಲರಿಗೂ ಬೇಕಾದ ಶಕ್ತಿಮದ್ದು’ (ಧಾರಿಣಿ ಮಾಯಾ, ಅ. 27) ಬರಹ ಚೆನ್ನಾಗಿದೆ. ದೊಡ್ಡವರು, ಮಕ್ಕಳಾದಿಯಾಗಿ ನಮ್ಮ ಒಂದು ಚೇತೋಹಾರಿಯಾದ ಪ್ರಶಂಸೆ, ಬೆನ್ನು ತಟ್ಟುವಿಕೆ, ಅವರ ಮುಂದಿನ ಸಾಧನೆಯ ಮೈಲುಗಲ್ಲು ಆಗುವುದರಲ್ಲಿ ಸಂದೇಹವಿಲ್ಲ. ಆದರೆ ಅದು ನಿಸ್ವಾರ್ಥವಾಗಿರಬೇಕು. ಲೇಖಕರು ಮಾತಿಗೆ ಮನಸ್ಸುಗಳನ್ನು ಬೆಸೆಯುವ ಶಕ್ತಿಯನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ.

—ಬಿ. ಗಂಗಾಧರ್, ಬೆಂಗಳೂರು

## ಸಾವಯವ-ಅನುಮಾನ

‘ಸಾವಯವ ಆಹಾರ’ (ಸುಚಿತ್ರಾ ಹೆಗಡೆ, ಅ. 20) ಬರಹದಲ್ಲಿ ಸಾವಯವ ಗೊಬ್ಬರ, ಕೃಷಿ, ಪ್ರಸ್ತುತ ದಿನಗಳಲ್ಲಿ ಸಾವಯವ ಉತ್ಪನ್ನಗಳು ಹೆಚ್ಚು ಪ್ರಾಮುಖ್ಯ ಪಡೆದಿವೆ ಮತ್ತು ಜನಪ್ರಿಯವಾಗಿವೆ ಎಂಬ ಬಗ್ಗೆ ಮಾಹಿತಿ ಇದ್ದು ಸಮಗ್ರವಾಗಿದೆ. ಸಾವಯವ ಉತ್ಪನ್ನಗಳಿಗೆ ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳೊಂದಿಗೆ ಹೆಚ್ಚು ಬೆಲೆ ಇದೆ. ಅವು ನಿಜವಾಗಿಯೂ ಸಾವಯವವೇ ಎಂಬ ಅನುಮಾನ ಕಾಡುತ್ತಿದೆ.

—ಡಾ. ಎಚ್.ಕೆ. ಲಕ್ಷ್ಮಣ್ ರಾವ್, ಪ್ರೊ. ಕೃಷ್ಣಪುಸಿ, ಚೆನ್ನೈ

## ಸ್ಪಷ್ಟನೆ

‘ಪ್ರಚಂಡ’ ಹೆಲಿಕಾಪ್ಟರ್ ಕುರಿತ ನನ್ನ ಲೇಖನದಲ್ಲಿ (ನ. 3), ನನ್ನ ಹೆಸರಿನ ಕೆಳಗೆ ‘ಹೆಲಿಕಾಪ್ಟರ್ ಡಿಸೈನ್ ಬ್ಯೂರೋದಲ್ಲಿ ಮುಖ್ಯ ವ್ಯವಸ್ಥಾಪಕಿಯಾಗಿ ಕಾರ್ಯ ನಿರ್ವಹಿಸಿದವರು’ ಎಂದು ಪ್ರಕಟವಾಗಿದೆ. ನಾನು ಎಚ್.ಎ.ಎಲ್. ನಲ್ಲಿ ‘ಚೀಫ್ ಡಿಸೈನರ್’ ಮತ್ತು ‘ಮುಖ್ಯ ವ್ಯವಸ್ಥಾಪಕಿ’ ಹುದ್ದೆಗಳಿಗೆ ಏರಿದ್ದರೂ, ಅದು ‘ಹೆಲಿಕಾಪ್ಟರ್ ಡಿಸೈನ್ ಬ್ಯೂರೋ’ ವಿಭಾಗದಲ್ಲಿ ಆಗಿರಲಿಲ್ಲ. ‘ಧ್ರುವ’ ಹೆಲಿಕಾಪ್ಟರಿನ ಡಿಸೈನ್ ತಂಡದಲ್ಲಿ ಆರಂಭದ ಹಂತದಿಂದ, ಅದು ‘ರುದ್ರ’ ಆಗುವವರೆಗೆ ಭಾಗಿಯಾಗಿದ್ದ ಈ ಲೇಖಕಿ, ‘ಪ್ರಚಂಡ’ದ ಪ್ರಥಮ ಹಾರಾಟದ ನಂತರ 2012ರಲ್ಲಿ ಬೇರೊಂದು ವಿಭಾಗಕ್ಕೆ ಬಡ್ತಿಯ ಮೇಲೆ ವರ್ಗವಾಗಿ ಹೋಗಿದ್ದಳು. ತಪ್ಪು ಕಲ್ಪನೆಗೆ ಕಾರಣವಾಗದಿರಲಿ ಎಂದು ಈ ಸ್ಪಷ್ಟನೆ.

—ನೇಮಿಚಂದ್ರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in